**ಮಾನ್ಯ ಅಪರ ಸಿವಿಲ್ ನ್ಯಾಯಾಲಯದ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ. ನಾಗಮಂಗಲ.**

**ದಿನಾಂಕಃ 25 ನೇ ಜನವರಿ 2023.**

**ಅಸಲು ದಾವಾ ಸಂಖ್ಯೆಃ 270/2016**

ವಾದಿ : ಗೀತಾ ಆರ್.

- ವಿರುದ್ಧ -

ಪ್ರತಿವಾದಿಗಳು : ಜಯಲಕ್ಷ್ಮಮ್ಮ ಮತ್ತು ಇತರರು.

ವಿವಾದಾಂಶಗಳು

1. ಪ್ರತಿವಾದಿಗಳು ದಾವಾ ಸ್ವತ್ತನ್ನು 1,56,000/- ರೂಪಾಯಿಗಳಿಗೆ ಮಾರಾಟ ಮಾಡಲು ಒಪ್ಪಿ ದಿನಾಂಕ 13.10.2011 ರಂದು ವಾದಿಯ ಪರವಾಗಿ ಕ್ರಯದ ಒಪ್ಪಂದದ ಕಾರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದು ವಾದಿಯು ಸಾಬೀತು ಪಡಿಸುತ್ತಾರೆಯೇ?

2. ಸದರಿ ಕ್ರಯದ ಒಪ್ಪಂದದ ಕರಾರನ್ನು ಮಾಡಿಕೊಟ್ಟ ದಿನದಂದು ಪ್ರತಿವಾದಿಗಳು ಮುಂಗಡ ಹಣವಾಗಿ 80,000/- ರೂಪಾಯಿಗಳನ್ನು ಮತ್ತು ದಿನಾಂಕ 16.02.2015 ರಂದು 1 ನೇ ಪ್ರತಿವಾದಿಯು 50,000/- ರೂಪಾಯಿಗಳನ್ನು ವಾದಿಯಿಂದ ಪಡೆದುಕೊಂಡಿರುತ್ತಾರೆಂದು ವಾದಿಯು ಸಾಬೀತು ಪಡಿಸುತ್ತಾರೆಯೇ?

3. ವಾದಿಯು ತನ್ನ ಪಾಲಿನ ಕರಾರಿನ ನೆರವೇರಿಕೆಗೆ ಸದಾ ಸಿದ್ದನಾಗಿ ಮತ್ತು ಇಚ್ಚೆವುಳ್ಳವನಾಗಿರುತ್ತಾನೆಂದು ಸಾಬೀತು ಪಡಿಸುತ್ತಾರೆಯೇ?

4. ತಾನು ವಾದಿಯಿಂದ ಪಡೆದುಕೊಂಡು ಸಾಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಯ ದೃಷ್ಟಿಗೆಂದು ವಾದಿಯು ತಮ್ಮಿಂದ ಖಾಲಿ ಚಾಪ ಕಾಗದದ ಮೇಲೆ ಸಹಿಯನ್ನು ಪಡೆದುಕೊಂಡಿರುತ್ತಾರೆಂದು 1 ನೇ ಪ್ರತಿವಾದಿ ಸಾಬೀತು ಪಡಿಸುತ್ತಾರೆಯೇ?

5. ವಾದಿಯ ತನಗೆ ಮೋಸವನ್ನು ಮಾಡಿ ಮತ್ತು ತಪ್ಪು ನಿರೂಪಣೆಯಿಂದ ಸಾಲದ ವ್ಯವಹಾರವನ್ನು ಕ್ರಯದ ಒಪ್ಪಂದದ ಕಾರಾರೆಂದು ದಿನಾಂಕ 13.10.2011 ರಂತೆ ಕ್ರಯದ ಕರಾರು ಪತ್ರವನ್ನು ಸೃಷ್ಟಿಸಿದ್ದಾರೆಂದು 1 ನೇ ಪ್ರತಿವಾದಿ ಸಾಬೀತು ಪಡಿಸುತ್ತಾರೆಯೇ?

6. ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸದೆ ಇರುವುದರಿಂದ ದಾವೆಯು ಊರ್ಜಿತವಾಗುವುದಿಲ್ಲವೆಂದು 1 ನೇ ಪ್ರತಿವಾದಿ ಸಾಬೀತು ಪಡಿಸುತ್ತಾರೆಯೇ?

7. ವಾದಿಯು ನಿರ್ಧಿಷ್ಟ ಕರಾರು ಪಾಲನೆಯ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಯೇ?

8. ಯಾವ ಆದೇಶ ಅಥವಾ ಡಿಕ್ರಿ?

**(ಕೆ.ಪಿ. ಸಿದ್ದಪ್ಪಾಜಿ)**
ಅಪರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ನಾಗಮಂಗಲ.